# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3004 (2537)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಅರವಿಂದಕುಮಾರ್ ಅರಳಿ(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಸಮಾಜ ಕಲ್ಯಾಣ ಸಚಿವರು

ವಿಷಯ : ಬೀದರ್ ಜಿಲ್ಲೆಯಲ್ಲಿ ಯೋಜನೆ ಹಾಗೂ ಅನುದಾನದ ಕುರಿತು

(ಅ) ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ಎಲ್ಲಾ ನಿಗಮ ಮಂಡಳಿಗಳಲ್ಲಿ ಫಲಾನುಭವಿಗಳ ಅಯ್ಕೆ ಮಾಡಲು ಇರುವ ಮಾನದಂಡಗಳೇನು; (ಸರ್ಕಾರದ ಸುತ್ತೋಲೆ ನಡವಳಿಗಳ ಬಗ್ಗೆ ಸಂಪೂರ್ಣ ದಾಖಲಾತಿ ಪ್ರತಿಗಳ ಪೂರ್ಣ ಮಾಹಿತಿ ನೀಡುವುದು)

(ಆ) ಎಲ್ಲಾ ನಿಗಮ ಮಂಡಳಿಗಳಲ್ಲಿ ಆಯ್ಕೆ ಸಮಿತಿಗಳಿದ್ದು, ಯಾವುದೇ ನಿಗಮ ಮಂಡಳಿಯಿಂದ ಇಲ್ಲಿಯವರೆಗೆ ಸದಸ್ಯರನ್ನು ಆಯ್ಕೆ ಸಮಿತಿ ಸಭೆಗೆ ಆಹ್ವಾನಿಸಿಲ್ಲದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) 2018-19 ರಿಂದ 2020-21ರವರೆಗೆ ನಡೆದ ಆಯ್ಕೆ ಸಮಿತಿಯ ಸಭೆ ದಿನಾಂಕ, ಸಮಯ, ಸ್ಥಳ, ಸಭೆಯ ನೋಟಿಸ್ ಪ್ರತಿ ಹಾಗೂ ಸಭೆಯ ನಡವಳಿ ಮತ್ತು ಮೂರು ವರ್ಷದ ಆಯ್ಕೆ ಪಟ್ಟಿಯೊಂದಿಗೆ ಸಂಪೂರ್ಣ ವರ್ಷವಾರು ಮಾಹಿತಿ ನೀಡುವುದು ;

(ಈ) ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ 2018-19 ರಿಂದ 2020-21ರವರೆಗೆ ಆಯ್ಕೆ ಸಮಿತಿಯ ಸಭೆ ದಿನಾಂಕ, ಸಮಯ, ಸ್ಥಳ ಸಭೆಯ ನೋಟಿಸ್ ಪ್ರತಿ ಹಾಗೂ ಸಭೆಯ ನಡವಳಿ ಮತ್ತು ಮೂರು ವರ್ಷದ ಆಯ್ಕೆ ಪಟ್ಟಿಯ ಸಂಪೂರ್ಣ ವರ್ಷವಾರು ಮಾಹಿತಿ ನೀಡುವುದು;

(ಉ) 2018-19 ರಿಂದ 2019-20ರವರೆಗೆ ಪ್ರಗತಿ ಕಾಲೋನಿ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಗೆ ಬಂದಿರುವ ಅನುದಾನ ಎಷ್ಟು ; ಹಾಗೂ ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ/ಪ್ರಗತಿಯಲ್ಲಿರುತ್ತವೆ ? (ಸಂಪೂರ್ಣವಾದ ಮಾಹಿತಿ ನೀಡುವುದು)